ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
ಸಿಸಿ.ನಂ.731/2021

ಸಾಕ್ಷಿಯ ಹೆಸರುಃ ನಾಗರಾಜ್ ಡಿಡಬ್ಲ್ಯೂ . 1

ತಂದೆಯ ಹೆಸರುಃ ತಮ್ಮಯ್ಯ ನಾಯಕ

ವಯಸ್ಸುಃ 48 ವರ್ಷ

ಉದ್ಯೋಗಃ ಕಂಟ್ರಾಕ್ಟರ್

ವಾಸಃ ಚಿಕ್ಕನಗುಂಡಿ

ದಿನಾಂಕಃ13/12/2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ ಆರೋಪಿ ಪರಃ ಶ್ರೀ ಕೆಆರ್ ಕೆ., ವಕೀಲರಿಂದಃ**

ನನಗೆ ಈ ಕೇಸಿನ ಫಿರ್ಯಾದುದಾರರ ಪರಿಚಯ ಇರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದ ಮೇಲೆ ಗೊತ್ತಾಗಿರುತ್ತದೆ. ನಾನು ಫಿರ್ಯಾದುದಾರರಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ ಹಾಗೂ ಅವರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ನಾನು ನನ್ನ ಚೆಕ್ಕನ್ನು ತಾಜೀಲ್ ಮುಬೀನ್ ಅವರಿಗೆ ನೀಡಿರುತ್ತೇನೆ. ಈ ಪ್ರಕರಣದಲ್ಲಿರುವ ಚೆಕ್ಕನ್ನು ಸೇರಿ ಒಟ್ಟು ನಾಲ್ಕು ಚೆಕ್ಕುಗಳನ್ನು ತಾಜೀಲ್ ಮುಬೀನ್ ಅವರಿಗೆ ನೀಡಿರುತ್ತೇನೆ. ನಾನು ಗಂಗನಸರಳು ಎಂಬಲ್ಲಿ ವಾಸವಿರುವುದಿಲ್ಲ, ಚಿಕ್ಕನಗುಂಡಿಯಲ್ಲಿ ವಾಸವಿರುತ್ತೇನೆ. ಫಿರ್ಯಾದುದಾರರಿಂದ ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ. ಐದಾರು ವರ್ಷಗಳಿಂದ ನನ್ನ ಹಾಗೂ ತಾಜೀಲ್ ಮುಬೀನ್ ಅವರ ನಡುವೆ ವ್ಯವಹಾರ ಇತ್ತು, ಅದಕ್ಕೆ ಸಂಬಂಧಿಸಿದಂತೆ ನಾನು ತಾಜೀಲ್ ಮುಬೀನ್ ಅವರಿಗೆ ನಾಲ್ಕು ಚೆಕ್ಕುಗಳನ್ನು ನೀಡಿರುತ್ತೇನೆ. ತಾಜೀಲ್ ಮುಬೀನ್ ಅವರು ನನ್ನ ಗೆಳೆಯರು. ಸದರಿ ಚೆಕ್ಕುಗಳ ವ್ಯಾಲಿಡಿಟಿ ಮುಕ್ತಾಯವಾಗಿರುವುದರಿಂದ ನಾನು ಅವರಿಂದ ಸದರಿ ಚೆಕ್ಕುಗಳನ್ನು ವಾಪಾಸು ಪಡೆದುಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ನನಗೆ

ತಾಜೀಲ್ ಮುಬೀನ್ ಅವರು ನೀಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಫಿರ್ಯಾದುದಾರರು ನೋಟಿಸನ್ನು ನೀಡಿರುತ್ತಾರೆ ಹಾಗೂ ಸದರಿ ಪ್ರಕರಣವನ್ನು ವಾಪಾಸು ಪಡೆದುಕೊಳ್ಳುತ್ತಾರೆ ಎಂದು ತಾಜಿಲ್ ಮುಬೀನ್ ಅವರು ನನಗೆ ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ನಮೂದಿಸಿರುವ ಚೆಕ್ಕನ್ನು ನಾನು ಫಿರ್ಯಾದುದಾರರಿಗೆ ನೀಡಿರುವುದಿಲ್ಲ. ಆದ್ದರಿಂದ ಫಿರ್ಯಾದುದಾರರು ದಾಖಲಿಸಿಕೊಂಡಿರುವ ಸುಳ್ಳು ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃಃ ಫಿರ್ಯಾದುದಾರರ ಪರಃ ಶ್ರೀ ಬಿಕೆವಿ., ವಕೀಲರಿಂದಃ**

(ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ದಿನಾಂಕಃ13/12/2024 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ